OFFICIAL RESOLUTION

Re : *Ratification of the Amendment to the Constitution of India by the Constitution (30th Amendment) Bill, 1972* *

Sri D. K. NAIKAR (Minister for Law and Parliamentary Affairs).—Madam, I beg to move :—

"That this House ratifies the amendments to the Constitution of India falling within the purview of the proviso to Clause (2) of article 368 thereof, proposed to be made by the Constitution (Thirtieth Amendment) Bill, 1972, at passed by the two Houses of Parliament."

Madam SPEAKER.—Motion moved :

"That this House ratifies the amendments to the Constitution of India falling within the purview of the proviso to Clause (2) of article 368 thereof, proposed to be made by the Constitution (Thirtieth Amendment) Bill, 1972, as passed by the two Houses of Parliament."

† ಶ್ರೀ ಡಿ. ಕೆ. ನಾಯಕರ್.—ಮಾನ್ಯ ಅಧ್ಯಕ್ಷರೇ, ಈಗ ಸಂವಿಧಾನದ ಆರ್ಟಿಕಲ್ 133, ಕ್ಲಾಜ್ 1ರ ಪ್ರಕಾರ ಸುಪ್ರೀಂ ಕೋರ್ಟಿಗೆ ಅಪೀಲು ಮಾಡುವ ಸಂಬಂಧ ಪ್ರಾವಿಷನ್ ಇದೆ. ಅದರಲ್ಲಿ ಏನು ಹೇಳಿದೆ ಎಂದರೆ 20 ಸಾವಿರಕ್ಕೆ ಮೇಲ್ಪಟ್ಟು ವ್ಯಾಲ್ಯೂ ಆಫ್ ಪ್ರಾಪರ್ಟಿ ಇದ್ದಲ್ಲಿ ಮಾತ್ರ ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗಲಿಕ್ಕೆ ಬರುತ್ತದೆ. ಹೀಗಿರುವುದರಿಂದ ಇದರ ಪರಿಣಾಮವೇನಾಗಿದೆ ಎಂದರೆ ಯಾವ ಕೇಸಿನಲ್ಲಿ ಪೆರಿತ್ ಇರುತ್ತದೆ ಅಥವಾ ಇಲ್ಲ, ಅಂಥ ಪ್ರಾಪರ್ಟಿ ಬೆಲೆ 20 ಸಾವಿರವಿದ್ದರೆ ಮಾತ್ರ ಸುಪ್ರೀಂ ಕೋರ್ಟಿಗೆ ಅಪೀಲು ಮಾಡುವ ಪರಿಪಾಠ ಏದೆ. ಇದರಿಂದ ಬಡಜನತೆಗೆ, ಬಡ ಕಕ್ಷಿಗಾರರಿಗೆ ಸುಪ್ರೀಂ ಕೋರ್ಟಿಗೆ ಹೋಗುವಂಥ ಅವಕಾಶ ಸ್ವಲ್ಪವಾಟ್ಟಿಗೆ ಇರುವುದಿಲ್ಲ. ಕೇವಲ ಶ್ರೀಮಂತರು ಹಣ ಖರ್ಚು ಮಾಡಿ ಸುಪ್ರೀಂ ಕೋರ್ಟಿಗೆ ಹೋಗುವಂಥ ಅವಕಾಶವನ್ನು ಇದರಲ್ಲಿ ಒದಗಿಸಲಾಗಿದೆ.

ಈಗ ಸಮತಾವಾದದ ಒಂದು ಪ್ರಿನ್ಸಿಪಲ್ ಪ್ರಕಾರ ಪ್ರತಿಯೊಬ್ಬ ಪ್ರಜೆಯೂ ಬಡವನೇ ಆಗಿರಲಿ, ಶ್ರೀಮಂತನೇ ಆಗಿರಲಿ ಅವರೆಲ್ಲಾ ಸರಿಸಮಾನರು ಎಂದು ಏನು ತಿಳಿಯುತ್ತೇವೋ ಅದು ಆಗಲು ಈಗಿನ ಕಾನೂನಿನಲ್ಲಿ ಆಗುತ್ತಾ ಇಲ್ಲ. ಆದುದರಿಂದ ಈ ನ್ಯೂನತೆಯನ್ನು ತೆಗೆಯುವುದಕ್ಕೋಸ್ಕರ ಈ ಅಮೆಂಡ್‌ಮೆಂಟ್‌ನ್ನು ತರಲಾಗಿದೆ.

ಇದರಲ್ಲಿ ಇನ್ನೊಂದು ಅಡ್ವಾಂಟೇಜ್ ಏನು ಆಗಿದೆ ಎಂದರೆ ಬಡವರಾಗಲಿ ಶ್ರೀಮಂತರಾಗಲಿ ಎಲ್ಲಾ ಒಂದೇ ಅನ್ನುವ ಉದ್ದೇಶದಿಂದ ಈ ಒಂದು ಅವಕಾಶವನ್ನು ಈ ಅಮೆಂಡ್‌ಮೆಂಟ್‌ನಲ್ಲಿ ಪ್ರೊಪೈಡ್ ಮಾಡಲಾಗಿದೆ. ಇದುವರೆಗೆ ವ್ಯಾಲ್ಯೂ ಆಫ್ ಪ್ರಾಪರ್ಟಿ 20 ಸಾವಿರ ರೂಪಾಯಿಗೆ ಮೀರಿದ ಕೇಸುಗಳನ್ನು ಸುಪ್ರೀಂ ಕೋರ್ಟ್‌ಗೆ ತೆಗೆದುಕೊಂಡು ಹೋಗುವ ಪ್ರಾವಿಷನ್ ಇತ್ತು. ಇದರಿಂದ ಹೆಚ್ಚು ಶ್ರೀಮಂತರು ಸುಪ್ರೀಂ ಕೋರ್ಟಿಗೆ ಹೋಗಲು ಅವಕಾಶವಾಗುತ್ತಿತ್ತೇ ವಿನಃ ಬಡವರಿಗೆ ಆಗುತ್ತಿರಲಿಲ್ಲ. ಈಗ ಯಾವ ಕೇಸು ಫಿಟ್ ಕೇಸು ಎಂದು ಕಂಡುಬರುತ್ತದೋ ಅದರ ಲೀಗಲ್ ಸ್ಯಾಂಕ್ಟಿಟಿಯನ್ನು ಸುಪ್ರೀಂ ಕೋರ್ಟು ತೀರ್ಮಾನ ಮಾಡುವುದು ಅವಶ್ಯ ಇದೆ. ಆದ್ದರಿಂದ ಬಡವರೂ ಕೂಡ ಅಪೀಲು ಹೋಗುವ ಅವಕಾಶವನ್ನು ಈ ಪ್ರಾವಿಸೋನಲ್ಲಿ ಮಾಡಲಾಗಿದೆ.

*Bill appended as annexure.

(ಶ್ರೀ ಡಿ. ಕೆ. ನಾಯಕರ್)

ಇನ್ನೂ ಇದರ ಜೊತೆಗೆ ಕೆಲವು ಪ್ರಾವಿಷನ್ ಮಾಡಲಾಗಿದೆ. ಈಗಾಗಲೇ ಇರತಕ್ಕಂಥ ಪೆಂಡಿಂಗ್ ಅಪೀಲುಗಳಿಗೆ ಹೈಕೋರ್ಟ್‌ನಿಂದ ಸರ್ಟಿಫಿಕೇಟ್ ಆಫ್ ಫಿಟ್‌ನೆಸ್ ತೆಗೆದುಕೊಂಡು ಹೋಗಲು ಮೊದಲು ಯಾವರೀತಿಯಲ್ಲಿ ಇತ್ತೋ ಆ ಕಾನೂನು ರೀತ್ಯ ನಡೆಯಬೇಕೆಂದು ಈ ಕಾನ್ಸ್‌ಟ್ಯೂಷನ್‌ನಲ್ಲಿ ಅಮೆಂಡ್‌ಮೆಂಟ್ ಬಿಲ್ ಪ್ರೊಪೈಡ್ ಮಾಡಲಾಗಿದೆ. ಇದರ ಬಗ್ಗೆ ರಾಜ್ಯ ಸಭೆಯಲ್ಲೂ ಮತ್ತು ಲೋಕಸಭೆಯಲ್ಲೂ ಅನೇಕ ಭಾಷಣಗಳು ಆಗಿವೆ. ಆದುದರಿಂದ ಮಾನ್ಯ ಸದಸ್ಯರು 3 8 ನೇ ಆರ್ಟಿಕರ್ ಪ್ರಕಾರ ನಮಲ್ಲಿ ಇರುವಂಥ ಕಾನೂನಿನಲ್ಲಿ ಇದನ್ನು ರೆಕ್ಟಿಫೈ ಮಾಡಬೇಕಾದ್ದು ಇದೆ. ಇದನ್ನು ಮಾಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಮಾನ್ಯ ಅಧ್ಯಕ್ಷಿಣಿಯವರೇ, ಸಂವಿಧಾನದ 133ನೇ ಆರ್ಟಿಕರ್ ತಿದ್ದುಪಡಿ ಏನು ಹೇಳುತ್ತದೆ ಎನ್ನುವುದನ್ನು ಈ ಸಭೆಯ ಮುಂದೆ ಮಂಡನೆ ಮಾಡಿದ್ದೀರಿ. ಇದರ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ನಮ್ಮ ಸರ್ಕಾರ, ಗರೀಬ್ ಹಟಾವೋ ಅನ್ನುವ ಸರ್ಕಾರ ಸಂವಿಧಾನದ ತಿದ್ದುಪಡಿಗೆ ಕಾರಣ ಕೊಟ್ಟು ಬಡವ ಶ್ರೀಮಂತ ಅನ್ನುವ ನ್ಯೂನತೆಯನ್ನು ಹೋಗಲಾಡಿಸಬೇಕು ಎನ್ನುವುದಕ್ಕೆ ಸಂಬಂಧ ಪಟ್ಟಂತೆ ಆಂತರಿಕ ವಿವರಗಳನ್ನು ಕೊಟ್ಟರು. ಆ ಮನೂದೆ ಏನೆಂದರೆ 20 ಸಾವಿರ ರೂಪಾಯಿ ಹೆಚ್ಚು ಮೌಲ್ಯ ಇದ್ದಂಥ ಸಿವಿಲ್ ಕೇಸುಗಳನ್ನು ಸುಪ್ರೀಂ ಕೋರ್ಟಿಗೆ ತೆಗೆದುಕೊಂಡು ಹೋಗಲು ಅವಕಾಶ ಇತ್ತು. ಈಗ ಉಳಿದಿರತಕ್ಕಂಥ ಕೇಸುಗಳನ್ನೂ ಸಹ ಕಾನೂನು ಪ್ರಕಾರ ಸುಪ್ರೀಂ ಕೋರ್ಟಿಗೆ ತೆಗೆದುಕೊಂಡು ಹೋಗಲು ಅವಶ್ಯ ಕಂಡು ಬಂದಲ್ಲಿ, ಸುಪ್ರೀಂ ಕೋರ್ಟಿಗೆ ತೆಗೆದು ಕೊಂಡು ಹೋಗಬೇಕಾದರೆ ಹೈಕೋರ್ಟ್ ಸರ್ಟಿಫಿಕೇಟ್ ಆಫ್ ಫಿಟ್‌ನೆಟ್ ಕೊಡಬೇಕು ಅನ್ನುವ ಒಂದು ಪ್ರಾವಿಷನ್ ತಂದಿದ್ದಾರೆ. ಅದು ಸ್ವಾಗತಾರ್ಹವಾದುದು.

ಈ ವಿಚಾರದಲ್ಲಿ ಒಂದು ಮೂಲಭೂತವಾದ ಪ್ರಶ್ನೆಯನ್ನು ಪ್ರಸ್ತಾಪಿಸುವುದಕ್ಕೆ ಇಷ್ಟ ಪಡುತ್ತೇನೆ. ಈಗ ನ್ಯಾಯಾಲಯದಲ್ಲಿರತಕ್ಕಂಥ ನ್ಯಾಯ ವಿತರಣೆ ಪದ್ಧತಿ ಏನಿದೆ ಇದು ಆಂಗ್ಲರ ಕಾಲದಿಂದ ಬಂದಂಥ ಪದ್ಧತಿ. ನಮ್ಮ ಭಾರತೀಯ ಪದ್ಧತಿ ಯಾವುದೂ ಈಗ ಇಲ್ಲ. ನಮ್ಮ ದೇಶದಲ್ಲಿ ಇಂಗ್ಲೀಷ್ ಆಳ್ವಿಕೆ ಪ್ರಾರಂಭವಾದಾಗಿನಿಂದ ಅಂದರೆ ಮೆಕಾಲೆ ಕಾಲದಿಂದ ಬಂದಿರ ತಕ್ಕಂಥ ಪದ್ಧತಿ, ಅದೇ ಸಂಪ್ರದಾಯ, ಅದೇ ಶಿಸ್ತು, ಅದೇ ನಡೆ ನುಡಿ ಇಂದೂ ಬಂದಿವೆ. ಸ್ವಾತಂತ್ರ್ಯ ಬಂದು 26 ವರ್ಷಗಳಾದರೂಕೂಡ ಹಳ್ಳಿಯ ಜನಜೀವನಕ್ಕೆ ಸಂಬಂಧಪಟ್ಟಂತೆ ಆರ್ಥಿಕವಾಗಿ, ಸಾಮಾಜಿಕವಾಗಿ, ನಮ್ಮ ಸಂಸ್ಕೃತಿಗೆ ಸಂಬಂಧಪಟ್ಟಂತೆ ನ್ಯಾಯಾಲಯಗಳಲ್ಲಿ ನ್ಯಾಯ ವಿತರಣೆ ಪದ್ಧತಿ ಯಾವ ತರಹದಲ್ಲಿ ಬದಲಾವಣೆ ಆಗಿಲ್ಲ. ಘೋಷಣೆಗಳನ್ನು ಮಾತ್ರ ಮಾಯಾ ಬಜಾರ್‌ನಂತೆ ಮಾಡುತ್ತಾರೆ. ಆದರೆ ಅದರ ಮೂಲಭೂತವಾದ ವಿಷಯಗಳನ್ನು ಮುಟ್ಟುವುದಿಲ. ಕೇವಲ ತೇಪೆ ಹಾಕುವ ಕೆಲಸವನ್ನು ಮಾಡುತ್ತಿದ್ದಾರೆ. ಆದ್ದರಿಂದ ಕೋರ್ಟು ಗಳಲ್ಲಿ ನ್ಯಾಯ ವಿತರಣೆಗೆ ಸಂಬಂಧಪಟ್ಟಂತೆ, ನಮ್ಮ ಸಂಸ್ಕೃತಿಗೆ ಸಂಬಂಧಪಟ್ಟಂತೆ ನ್ಯಾಯ ವಿತರಣೆ ಪದ್ಧತಿಯಲ್ಲಿ ಬದಲಾವಣೆ ಆಗಬೇಕು ಎಂದು ಹೇಳುತ್ತೇನೆ. ಈ ಪರಿಸರವನ್ನು ಲಕ್ಷದಲ್ಲಿಟ್ಟುಕೊಂಡು ಜನರಿಗೆ ಸರಿಯಾದ ರೀತಿಯಲ್ಲಿ ನ್ಯಾಯ ಸಿಕ್ಕುವಂತೆ ಮಾಡಬೇಕು. ಹಿಂದೆ ಇದ್ದ ಪಂಚಾಯಿತಿ ಪದ್ಧತಿ ಈಗ ಇಲ್ಲ, ಅದಕ್ಕಾಗಿ ವಿಷಾದ ಪಡುತ್ತೇನೆ. ಹಿಂದೆ ಹಳ್ಳಿಗಳಲ್ಲಿ ಒಂದು ನ್ಯಾಯ ದೊರಕ ಬೇಕಾದರೆ ಹತ್ತೂ ಜನರನ್ನು ಕರೆಸಿ, ಆ ಊರಿನ ಮುಖ್ಯಸ್ಥರನ್ನೂ ಕರೆಸಿ ನ್ಯಾಯ ವಿತರಣೆ ಮಾಡುವ ಪದ್ಧತಿ ಇತ್ತು. ಇದರಿಂದ ನ್ಯಾಯ ಸರಿಯಾದ ರೀತಿಯಲ್ಲಿ ಇತ್ಯರ್ಥವಾಗುತ್ತಿತ್ತು. ಈಗ ಪ್ರತಿಯೊಂದಕ್ಕೂ ಕೂಡ ಕೋರ್ಟು ಹತ್ತಬೇಕಾಗಿದೆ. ಸಣ್ಣ ಪುಟ್ಟ ಕೇಸುಗಳಿಗೂ ಕೂಡ ಕೋರ್ಟ್‌ಗೆ ಹೋಗ ಬೇಕಾಗಿದೆ. ತಾಲ್ಲೂಕು ಮಟ್ಟದಲ್ಲಿಯೇ ಆಗಲ, ಜಿರ್ಲಾ ಮಟ್ಟದಲ್ಲಿಯೇ ಆಗಲ, ರಾಜ್ಯ ಮಟ್ಟದಲ್ಲಿಯೇ ಆಗಲಿ ಅದಕ್ಕೆ ತಕ್ಕಂತೆ ಮುನ್ಸೀಫ್ ಕೋರ್ಟು, ಹೈಕೋರ್ಟು ಮತ್ತು ಸುಪ್ರೀಂ ಕೋರ್ಟ್‌ಗೆ ಹೋಗಬೇಕಾಗಿದೆ. ಹಿಂದೆ ಪ್ರಿವಿ ಕೌನ್ಸಿಲ್ ಇತ್ತು. ಅವಾಗ ಫೆಡರಲ್ ಕೋರ್ಟ್ ಆದೇಶ ತೆಗೆದುಕೊಂಡು ಪ್ರಿವಿ ಕೌನ್ಸಿಲ್‌ಗೆ ಹೋಗುತ್ತಿದ್ದರು. ಈಮೊತ್ತೂ ಕೂಡ ಅವರು ಹಾಕಿಕೊಟ್ಟಂಥ ಒಂದು ತಳಹದಿಯ ಮೇಲೆ ಇದು ಹೋಗುತ್ತಾ ಇದೆ. ರಾಷ್ಟ್ರದಲ್ಲಿ ಈಗ ಇರತಕ್ಕಂಥ ನ್ಯಾಯಾಲಯದಲ್ಲಿ ಮೂಲಭೂತವಾದ ನ್ಯಾಯ ವಿತರಣೆ ಮಾಡುವ ಪದ್ಧತಿ ಏನು ಇದೆ ಅದು ಬದಲಾವಣೆ ಆಗಬೇಕು. ನಮ್ಮ ರಾಷ್ಟ್ರದ ಸಮಾಜಕ್ಕೆ, ಆರ್ಥಿಕ ಬದಲಾವಣೆಗೆ ಹೊಂದಿಕೊಂಡು ಹೋಗಬೇಕು ಎಂದು ಹೇಳಲು ಅಪೇಕ್ಷೆ ಪಡುತ್ತೇನೆ.

ಇನ್ನು ಇವೊತ್ತು ವಕೀಲರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಲೋಕ ಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಇದರ ಬಗ್ಗೆ ಚರ್ಚೆ ಆಗಿದೆ. ಆದರೆ ಈವೊತ್ತು ನ್ಯಾಯಾಲಯಗಳಲ್ಲಿ ಏನಾಗುತ್ತದೆ ಎನ್ನುವುದರ ಬಗ್ಗೆ ನಾನು ಹೇಳುವುದು ಅನಿವಾರ್ಯ. ಈವೊತ್ತು ನ್ಯಾಯಾಲಯಗಳಲ್ಲೂ ಕೂಡ ಅನ್ಯಾಯ ನೆಡೆಯುತ್ತಾ ಇವೆ ಎನ್ನುವ ಬಗ್ಗೆ ನಮಗೂ ಗೊತ್ತಿದೆ. ತಮಗೂ ಗೊತ್ತಿದೆ ರಾಜ್ಯದ ಶ್ರೇಷ್ಠ ನ್ಯಾಯಾಲಯವಾದ ಹೈಕೋರ್ಟ್ ಬಗ್ಗೆ ಹೇಳುವುದಾದರೆ ಅಲ್ಲಿ ಜಡ್ಜಸ್‌ಗಳಲ್ಲಿ ಮೂರು ಗುಂಪುಗಳು ಇವೆ. ಬ್ರಾಹ್ಮಣರು, ಲಿಂಗಾಯಿತರು, ಇತರರು ಈ ರೀತಿ ಇದೆ ಎಂದು ನಾನು ಕೇಳಿದ್ದೇನೆ. ಆರೀತಿ ಇದ್ದರೆ ಇದೆ ಎಂದು ಹೇಳಿ, ಇಲ್ಲದಿದ್ದರೆ ಇಲ್ಲ ಎಂದು ಹೇಳಿ.

ಶ್ರೀ ಹೆಚ್. ಸಿದ್ದವೀರಪ್ಪ.—ಈ ಬಿಲ್ಲಿನಲ್ಲಿ ಆ ವಿಷಯ ಹೇಗೆ ಬರುತ್ತದೆ ?

ಶ್ರೀ ಕೋಣಂಡೂರು ಲಿಂಗಪ್ಪ.—ನೀವು ಮಾಡುವುದಿದೆಲ್ಲಿಕೆಲವು ಬರುವುದಿಲ್ಲ. ನಮಗೆಕ್ಕೆ ಎತ್ತುವುದು ಒಂದೇ ಬರುವುದು. ಈ ಪೊತ್ತು ಸುಪ್ರೀಂ ಕೋರ್ಟ್‌ನಲ್ಲಿ, ಹೈಕೋರ್ಟ್‌ನಲ್ಲಿ ವೆಕೇರೆ ಕಾಲದಿಂದ ನಡೆದುಕೊಂಡು ಬಂದಂಥ ಪದ್ಧತಿಯೇ ಬಂದಿದೆ. ಅಲ್ಲಿ ಜಡ್ಜಸ್‌ಗಳನ್ನು ಸಂಬೋಧಿಸಬೇಕಾದರೆ "ಮೈ ಲಾರ್ಡ್" ಎಂದು ಹೇಳುತ್ತಾರೆ. ಆ ಪದ್ಧತಿ ಏತಕ್ಕೆ ಬದಲಾವಣೆ ಆಗಬಾರದು ? ಅವರು ಹಾಕಿಕೊಂಡು ಬಾತಕ್ಕಂಥ ಗೌನುಗಳು ಏತಕ್ಕೆ ಬದಲಾವಣೆ ಆಗಬಾರದು ? ಇದನ್ನು ವಿಚಾರ ಮಾಡಬೇಕು. ಈ ಸ್ವತಂತ್ರ ರಾಷ್ಟ್ರ ನಮ್ಮದೇ ಅನ್ನುವುದಾದರೆ, ನಮಗೆ ಸ್ವಾತಂತ್ರ್ಯ ಬಂದದ್ದು ನಿಜ ಇದ್ದಲ್ಲಿ ನಮ್ಮ ರಾಷ್ಟ್ರಕ್ಕೆ ಸಂಬಂಧಪಟ್ಟಂತೆ ಹೊಂದಿಕೊಂಡು ಬರಬೇಕು. ನಮ್ಮ ವಕೀಲರುಗಳು ಕೋರ್ಟ್‌ಗೆ ಹೋಗ ಬೇಕಾದರೆ ಬಿಳಿ ಪ್ಯಾಂಟ್, ಕರೀ ಗೌನ್‌ಗಳನ್ನು ಹಾಕಿಕೊಂಡು ಹೋಗಬೇಕು, ಕುತ್ತಿಗೆಗೆ ಟೈ ಕಟ್ಟಿಕೊಂಡು ಹೋಗಬೇಕು. ಈ ಪದ್ಧತಿ ಏತಕ್ಕೆ ಬೇಕು ? ನಮ್ಮ ಭಾರತೀಯ ವಿಧಾನದ ಉಡುಗೆ ತೊಡಿಗೆಗಳನ್ನು ಹಾಕಿಕೊಂಡು ಬರುವಂತೆ ಏತಕ್ಕೆ ನಿಯಮ ತರಬಾರದು.

ಶ್ರೀ ಡಿ. ದೇವರಾಜ್ ಅರಸ್.—ತಾವೇ ಒಂದು ಯೂನಿಫಾರಂ ಪ್ರಿಸ್ಕ್ರೈಬ್ ಮಾಡಿ.

ಶ್ರೀ ಕೋಣಂಡೂರು ಲಿಂಗಪ್ಪ.—ನಮ್ಮ ರಾಜ್ಯದಲ್ಲಿ ಒಂದು ಯೂನಿಫಾರಂ ಪ್ರಿಸ್ಕ್ರೈಬ್ ಮಾಡೋಣ. ಆಯಾಯಾ ರಾಜ್ಯದಲ್ಲಿ ಅವರವರಿಗೆ ಪ್ರಿಯವಾದ ಯೂನಿಫಾರಂ ಇರಲಿ. ಎರಾ ರಾಜ್ಯಕ್ಕೂ ಒಂದೇ ಯೂನಿಫಾರಂ ಇರಲೇ ಬೇಕಾಗಿಲ್ಲ. ಯಾರಿಗೆ ಯಾವುದು ಪ್ರಿಯವೋ ಅದು ಅವರಿಗೆ ಪ್ರಿಯವಾದದ್ದು, ಅವರ ಇಷ್ಟ ಏನು ಇದೆಯೋ ಆ ಯೂನಿಫಾರಂನ್ನು ಉಟ್ಟುಕೊಂಡು ಬರಲಿ.

2-30 P.M.

ಅದನ್ನು ಬಿಟ್ಟರೆ ಹಳೆಕಾಲದ ಕರಿಕೋಟು ಬಿಳಿಚಡ್ಡಿ, ಬೀಳೇ ಪೇಟ ಯಾತಕ್ಕೆ ? ಅವರನ್ನ ಜ್ಯೂನಲ್ಲಿರುವ ಪ್ರಾಣಿಗಳನ್ನು ನೋಡಿದಹಾಗೆ ಆಗುತ್ತದೆ, ಕೆಲವುಸಾರಿ. ಇಂಗ್ಲೀಷ್ ಪದ್ಧತಿ ದೂರವಾಡಿ ಇಲ್ಲಿ ನಮ್ಮ ರಾಷ್ಟ್ರಕ್ಕೆ ಒಗ್ಗುತಕ್ಕ ಉಪುಪನ್ನು ಹಾಗೂ ನಡೆನುಡಿಗಳನ್ನು ಅಳವಡಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಂಗ್ಲೀಷರ ಕಾಲದಿಂದ ಏನು ನಡೆದುಬಂದಿದೆ ಒಂದು ಸೂಜಿ ಮನೆಯಷ್ಟು ಅತ್ತಿತ್ತ ಚಲಿಸಿಲ್ಲ. 25 ವರ್ಷಗಳಿಂದ ನಮ್ಮ ರಾಷ್ಟ್ರದಲ್ಲಿ ಯಾವುದೇ ರೀತಿ ನ್ಯಾಯಪದ್ಧತಿಯಲ್ಲೇ ಆಗಲ, ಶಿಕ್ಷಣ ಕ್ಷೇತ್ರದಲ್ಲಾಗಲಿ ಮೂಲಭೂತವಾದ ಬದಲಾವಣೆಗೆ ಪ್ರಯತ್ನಮಾಡಿಲ್ಲ ಮತ್ತು ಮಾಡುತ್ತಾ ಇಲ್ಲ. ಕೇವಲ ಘೋಷಣೆ, ಭಾಷಣ ಇಷ್ಟೇ ಮಾತ್ರ ಮಾಡಿಕೊಂಡು ಬಂದಿರುವುದಕ್ಕೆ ಸಾಕಷ್ಟು ರುಜುವಾತು ಇವೆ. ಆದುದರಿಂದ ನ್ಯಾಯಾಲಯಗಳು ಏನು ಇವೆ ಅವುಗಳ ಬಗ್ಗೆ ಹೊಸ ದೃಷ್ಟಿಕೋಣದಿಂದ ಅವುಗಳನ್ನು ವಿವೇಚಿಸಬೇಕು, ಅವುಗಳ ರಚನೆ ಯಾಗಬೇಕು. ನಮ್ಮ ಜನರ ಭಾಷೆಯಲ್ಲಿ ನ್ಯಾಯ ವಿತರಣೆಯಾಗಬೇಕು. ಜನರ ಭಾಷೆಯಲ್ಲಿ ನ್ಯಾಯವಿತರಣೆಯಾಗುವವರೆಗೂ ಜನತಾ ನ್ಯಾಯಾಲಯವಾಗುವುದಿಲ್ಲ. ಈಗಿನದು ಕೇವಲ ಇಂಗ್ಲೀಷ್ ಬಲ್ಲಂತಹ ಮೇಲುವರ್ಗದ ಜನಸಂಖ್ಯೆಯಲ್ಲಿರತಕ್ಕ ಸೇಕಡ 2 ಜನರಿಗೆ ಮಾತ್ರ ಅದೇ ತರಹ ಬಿಳಿಪೇಟ ಹಾಕಿಕೊಂಡಂತಹ ನಿಮ್ಮೇ ಬ್ರಾಹ್ಮಣರಿಗೆ ಸಂಬಂಧಪಟ್ಟಂಥ ವ್ಯವಸ್ಥೆ. 100ಕ್ಕೆ 80 ಜನ ಏನು ಇದ್ದಾರೆ ಅವರ ಭಾಷೆ ಏನು ಇದೆ. ಈ ರಾಜ್ಯದಲ್ಲಿ, ಆ ಭಾಷೆಯಲ್ಲಿ ನ್ಯಾಯ ವಿತರಣೆಯಾಗಬೇಕು, ಅದು ಬಹಳ ಮುಖ್ಯ. ಅದು ಇಲ್ಲದಿದ್ದರೆ ನಮ್ಮ ವಕೀಲರಿಗೆ ಹಾಯಿದೆಯಾಗುತ್ತದೆ. ಜನರಿಗೆ ಅರ್ಥವಾಗುವುದಿಲ್ಲ ಕೇಸ್ ಡಿಸ್‌ಮಿಸ್ ಆಯಿತು ಎಂದರೆ, ಗೆದ್ದು ಬರುತ್ತೇನೆ ಹೋಗು, ಬರೆಯುತ್ತೇನೆ ಎಂದು ಜನರಿಗೆ ವಂಚಿಸುತ್ತಾರೆ. ನಾನು ನಣ್ಣ ವಕೀಲ

(ಶ್ರೀ ಕೋಣಂದೂರು ಲಿಂಗಪ್ಪ)

ನಾಗಿ ಹೇಳುತ್ತೇನೆ ಸಾಮಾನ್ಯ ಜನರಿಗೆ ಗೊತ್ತಿಲ್ಲದ ಭಾಷೆಯಲ್ಲಿ ನಾವು ನ್ಯಾಯಾಲಯದಲ್ಲಿ ವಾದ ವಿವಾದಗಳನ್ನು ಮಾಡುವುದರಿಂದ ಅತ್ಯ ವಂಚನೆಮಾಡುತ್ತಿದ್ದೇವೆ ಮತ್ತು ಜನರಿಗೂ ವಂಚನೆ ಮಾಡುತ್ತೇವೆ. ಜನರ ಭಾಷೆಯಲ್ಲಿ ನ್ಯಾಯದೊರಕಬೇಕು. ಆದಕ್ಕಾಗಿ ಕನ್ನಡ ರಾಜ್ಯಭಾಷೆ ಯಾಗಬೇಕು ಎಂದು ಹೇಳಿ ಇಲ್ಲಿ ತಿದ್ದುಪಡಿ ಏನು ತಂದಿದ್ದಾರೆ ಅದಕ್ಕೆ ನ್ಯಾಗತಸೀಡಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೆ. ಜೆಡ್).—ಮಾನ್ಯ ಸಭಾಧ್ಯಕ್ಷಣಿಯವರೇ, ಈ ಸಂವಿಧಾನದ ತಿದ್ದುಪಡಿ ಬಗ್ಗೆ ಹೆಚ್ಚಿನ ವಿವಾದವಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇದರಿಂದ ಯಾರಿಗೂ ಯಾವ ವಿಧವಾದ ನಷ್ಟವೂ ಇಲ್ಲ. ಆದರೆ ಸುಪ್ರೀಂ ಕೋರ್ಟು ಕೇಸ್ ತೆಗೆದುಕೊಳ್ಳಬೇಕಾದರೆ 20 ಸಾವಿರ ರೂಪಾಯಿ ಬೆಲೆ ಇರಕ್ಕೆ ಕೇಸ್ ಆಗಬೇಕು ಎಂದು ಏನು ನಿಬಂದನೆ ಇಟ್ಟೋ ಅದನ್ನು ತೆಗೆಯಬೇಕು ಎಂದು ಇವರಲ್ಲಿ ಇವೆ. ಮೊದಲು ಇದನ್ನು ಯಾವಕಾರಣದಿಂದ ಕಾನ್ಸಿಟ್ಯೂಷನ್ನಿನಲ್ಲಿ ಸಬರಿಸಿದೆಯೋ ನಮಗೆ ಗೊತ್ತಾಗಲಿಲ್ಲ. ಈಗ 20 ಸಾವಿರ ರೂಪಾಯಿ ಬೆಲೆಗೆ ಸಂಬಂಧಪಟ್ಟ ನಿಬಂಧನೆಯನ್ನು ತೆಗೆಯುತ್ತಿದ್ದಾರೆ. ಮತ್ತು ಇದರಿಂದ ಬಡವ ಉದ್ಧಾರವಾಗುತ್ತಾನೆ ಎನ್ನುವ ಅಂಶವನ್ನು ಇಲ್ಲಿ ಎತ್ತಿದ್ದಾರೆ. ಇದರಿಂದ ಯಾವರೀತಿ ಬಡವನಿಗೆ ಅನುಕೂಲವಾಗುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಏತಕ್ಕೆಂದರೆ ನ್ಯಾಯದೃಷ್ಟಿಯಿಂದ ಅಪೀಲ್ ಹೋಗುವುದಕ್ಕೆ ಅವಕಾಶ ಇದೆ. ದುಡ್ಡಿನ ಪ್ರಾಧಾನ್ಯತೆ ಬೇಡ ಎಂದು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಬಡವರಿಗೆ ಯಾವರೀತಿ ಅನುಕೂಲವಾಗುತ್ತದೆ ಎನ್ನುವುದು ಅರ್ಥವಾಗುತ್ತಾ ಇಲ್ಲ. ಸುಪ್ರೀಂ ಕೋರ್ಟಿಗೆ ಹೋಗುವುದೇ ಮಹಾಪರಾಧ ಮತ್ತು ಹೆಚ್ಚಿನ ಹೊರೆ ಎಂದು ನಾನು ತಿಳಿದುಕೊಂಡಿದ್ದೇನೆ. ಸುಪ್ರೀಂ ಕೋರ್ಟಿನ ಸೀನಿಯರ್ ಲಾಯರ್‌ಗೆ ಸಾವಿರಾರು ರೂಪಾಯಿ ಕೊಡಬೇಕು. ಕೇಸುಗಳನ್ನು ಕೋರ್ಟಿನಲ್ಲಿ ಫೈಲ್ ಮಾಡಬೇಕಾದರೆ, ಬೆಂಗಳೂರಿನಿಂದ ಲಾಯರನ್ನು ಕಳುಹಿಸ ಬೇಕಾದರೆ ಏರ್‌ಫ್ಲೈಟ್ ಚಾರ್ಜು ಕೊಟ್ಟು ಕಳುಹಿಸುವುದಕ್ಕೆ ಸಾವಿರಾರು ರೂಪಾಯಿ ಖರ್ಚಾಗುತ್ತದೆ. ಅಷ್ಟೇ ಅಲ್ಲ ಮತ್ತೆ 6—7 ವರ್ಷಗಳಾದಮೇಲೆ ಕೇಸ್ ತೀರ್ಮಾನವಾದಾಗ ಕೋರ್ತಿ ಕಚ್ಚಾಯಿಯನ್ನು ಬೆಕ್ಕುಗಳಿಗೆ ಹಂಚಿದಹಾಗೆ ಇಬ್ಬರೂ ಸುನ್ನು ಆಗುತ್ತಾರೆ. ಒಟ್ಟಿನಲ್ಲಿ ನ್ಯಾಯ ದೊರಕುತ್ತದೆಯೋ ಎನ್ನುವುದು ನೋಡಬೇಕಾಗಿದೆ. ಕೋರ್ಟಿಗೆ ಹೋದವರು ಯಾರೂ ಉಳಿದಿಲ್ಲ. ನಮ್ಮ ತಂದೆ 1915ರಲ್ಲಿ ಕೋರ್ಟಿಗೆ ಹೋದರು. 1935ರಲ್ಲಿ ಹುಚ್ಚು ಹಿಡಿದು ಸತ್ತಾಗ ಕೊರ್ಟು ವ್ಯವಹಾರ ಮುಗಿಯಿತು. ಸೋತವನು ಮುಳುಗಿಹೋಗುತ್ತಾನೆ. ಗೆದ್ದವನಗತಿ ಸಂತೋಷ ಪಟ್ಟೇ ಹೊರತು ಅವನ ಹೆಚ್ಚು ಭಾಗ ಆಸ್ತಿ ಕಳೆದುಕೊಂಡಿರುತ್ತಾನೆ. ಸಣ್ಣಪುಟ್ಟ ಕನ್‌ಸೆನ್ ಕೊಡುವುದರ ಬದಲಿಗೆ ಹೆಚ್ಚಿನ ಖರ್ಚು ಇಲ್ಲದೆ ಕೇಸ್ ತೀರ್ಮಾನ ಮಾಡುವುದಕ್ಕೆ ಒಂದು ಸಂಕಲ್ಪ ಮಾಡಿದರೆ ಒಳ್ಳೆಯದು ಮತ್ತು ಉತ್ತಮ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಅನೇಕ ವ್ಯವಹಾರಗಳನ್ನು ನಾವು ನಾವೇ ತೀರಿಸಿಕೊಳ್ಳತಕ್ಕ ಪರಿಸ್ಥಿತಿ ಇದೆ. ಕೋರ್ಟಿಗೆ ಹೋಗುವ ವ್ಯವಹಾರವನ್ನು ನಾಧ್ಯವಾದಷ್ಟು ಕಡಿಮೆ ಮಾಡುವ ಪ್ರಯತ್ನಮಾಡಬೇಕು. ಕಾರ್ಪೋರೇಷನ್ ನೂಪರಸೀಡ್ ಮಾಡಿದಾಗ ಹೈಕೋರ್ಟಿನ ತೀರ್ಮಾನದ ಬಗ್ಗೆ ಸುಪ್ರೀಂ ಕೋರ್ಟಿಗೆ ಹೋದಾಗ ಅದು ಒಂದು ಜೆಕ್ಕಿಕಲ್ ಪಾಯಿಂಟ್‌ಮೇರೆ ಎತ್ತಿಹಾಕಿದರು. ಅದಕ್ಕೆ ಮೂರುಸಾವಿರ ರೂಪಾಯಿ ಖರ್ಚುಆಯಿತು. ರಿವಿಷನ್ ಹೋಗಬೇಕಾದರೆ ನನ್ನ ಕೈಯಲ್ಲಿ ಸಾಧ್ಯವಾಗಲಲ್ಲ. ಸುಪ್ರೀಂ ಕೋರ್ಟು ವ್ಯವಹಾರ, ಹೈಕೋರ್ಟು ವ್ಯವಹಾರ ಸಾಮಾನ್ಯ ಜನಗಳಿಗೆ ಸಾಧ್ಯವಾಗುವುದಲ್ಲ ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೋರ್ಟಿನ ವ್ಯವಹಾರ ನಿಜವಾಗಿ ಒಳ್ಳೆಯದಲ್ಲ. ಸರ್ಕಾರದವರು ನಿಜವಾಗಿ ಕೂಡ ಜನಗಳ ಬಗ್ಗೆ ಒಂದು ವಿಶ್ವಾಸನ ಇಟ್ಟುಕೊಂಡಿದ್ದರೆ, ಬಡವರ ಬಗ್ಗೆ ಕನಿಕರ ಇಟ್ಟುಕೊಂಡಿದ್ದರೆ, ಆದಷ್ಟು ಕೇಸುಗಳನ್ನು ಉದ್ಭವಮಾಡುವುದಕ್ಕೆ ಬದಲಿಗೆ ಆದಷ್ಟು ಅವನ್ನು ಕಡಿಮೆ ಮಾಡುವಂತೆ ಮಾಡಬೇಕು. ಇನ್ನು ಸರ್ವೀಸ್ ರೆಗ್ಯೂಲೇಷನ್ ತೆಗೆದುಕೊಂಡರೆ ಒಂದೇ ಸಾರಿ ತೀರ್ಮಾನ ಮಾಡುವುದಿಲ್ಲ. ಅನೇಕ ಸರ್ವೀಸ್ ಕೇಸುಸ್ ಹೋಗಿ ಸುಪ್ರೀಂ ಕೋರ್ಟಿನಲ್ಲಿ ವಾದವಿವಾದಗಳು ನಡೆಯುತ್ತಿವೆ. ಅದರಿಂದ ಕಾಯಿದೆಗಳನ್ನು ಮಾಡುವಾಗ ಒಂದು ನ್ಯಾಯವಾದ ರೀತಿಯಲ್ಲಿ ಕಾಯಿದೆ ಮಾಡಿದರೆ ಕೋರ್ಟಿಗೆ ಹೋಗುವುದು ಅನಾವಶ್ಯಕವಾಗುತ್ತದೆ. ಕೋರ್ಟಿಗೆ ಹೊಗುವಂತಹ ಪ್ರಸಂಗ ವನ್ನು ಕಡಿಮೆಮಾಡಬೇಕು ಮತ್ತು ಕೋರ್ಟಿನ ಖರ್ಚನ್ನು ಕಡಿಮೆ ಮಾಡುವುದನ್ನು ಯೋಚನೆ ಮಾಡಬೇಕಾಗಿದೆಯೇ ಹೊರತು ಇಂತಹ ಸಣ್ಣಪುಟ್ಟಕನ್‌ಸೆಷನ್‌ಗಳಿಂದ ಹೆಚ್ಚು ಅನುಕೂಲವಾಗುವು ದಿಲ್ಲ. ಬಡವರಿಗೆ ನ್ಯಾಯ ದೊರಕಿಸಿಕೊಳ್ಳಲು ಹೈಕೋರ್ಟು ಮತ್ತು ಸುಪ್ರೀಂ ಕೋರ್ಟಿಗೆ

ಹೋಗಲು ಸಾಧ್ಯವಾಗುವುದಿಲ್ಲ. ಲಾಯರುಗಳಿಗೆ ಸಾವಿರಾರು ರೂಪಾಯಿಗಳನ್ನು ಕೊಟ್ಟು ಕೊಂಡು ಇತರ ಖರ್ಚುಗಳನ್ನು ತೂಗಿಸುವುದಕ್ಕೆ ಅವರಿಂದ ಸಾಧ್ಯವಾಗುವುದಿಲ್ಲ. ಸರ್ಕಾರದವರು ನ್ಯಾಯ ದೊರಕಿಸಿ ಕೊಡಬೇಕಾದರೆ ಬಡವರಿಗೆ ಏನು ಮಾಡಬೇಕು. ಎಂದು ಯೋಚನೆ ಮಾಡಬೇಕು. ಈಗಿರುವ ಲಾ ಪ್ರಕಾರ 20 ಸಾವಿರ ರೂಪಾಯಿ ನಿಗದಿ ಮಾಡಿದ್ದನ್ನು ತೆಗೆದು ಹಾಕುತ್ತಿದ್ದಾರೆ. 2ನೆಯದಾಗಿ ಯಾವುದಾದರೂ ಕೇಸ್‌ನಲ್ಲಿ ಅದರ ತೀರ್ಮಾನ ಕೊಟ್ಟಿದ್ದರೆ ಇದು ಅದಕ್ಕೆ ಅನ್ವಯಿಸುವುದಿಲ್ಲ ಎಂದು ಹೇಳುತ್ತಾರೆ. ಮತ್ತು ಸಬ್‌ಸ್ಟ್ಯಾಂಟೀವ್ ಪಾಯಿಂಟ್ ಆಫ್ ಲಾ ಇದ್ದರೆ ಮಾತ್ರ ಸುಪ್ರೀಂ ಕೋರ್ಟ್‌ಗೆ ಹೋಗುವುದಕ್ಕೆ ಅವಕಾಶವಿದೆ. ಈ ಮೂರು ಅಂಶಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಪಾಯಿಂಟ್ ಆಫ್ ಲಾ ಯೋಚನೆ ಮಾಡಿದ್ದಾರೆ, ಆದರೆ ಪಾಯಿಂಟ್ ಆಫ್ ಫ್ಯಾಕ್ಟ್ ಬಗ್ಗೆ ಅಪೀಲ್ ಹೋಗುವುದಕ್ಕೆ ಅವಕಾಶ ಮಾಡದೆ ಇರುವುದು ಶೋಚನೀಯವಾದ ವಿಚಾರ. ಅನೇಕ ಸಂದರ್ಭಗಳಲ್ಲಿ ಒಂದಾನೊಂದು ಕಾಲದಲ್ಲಿ ಹೈಕೋರ್ಟಿನಲ್ಲಿ ನ್ಯಾಯ ದೊರಕುತಿತ್ತು. ಈಗ ಹೈಕೋರ್ಟಿನ ಜಡ್ಜಸ್ ಕೂಡ ಪ್ರಭಾವಕ್ಕೆ ಮತ್ತು ಒತ್ತಡಕ್ಕೆ ಮಣಿಯುತ್ತಾರೆ ಎಂದು ಸಂದೇಹವಾಗುತ್ತಿದೆ. ಇಂಥ ಸಂದರ್ಭದಲ್ಲಿ ಅನ್ಯಾಯವಾಗಿದೆ ಎನ್ನುವುದನ್ನು ಬಗೆಹರಿಸಿ ಕೊಳ್ಳಬೇಕಾದರೆ ಪಾಯಿಂಟ್ ಆಫ್ ಲಾ ಇಲ್ಲವೇ ಪಾಯಿಂಟ್ ಆಫ್ ಫ್ಯಾಕ್ಟ್‌ನಲ್ಲಿ ಕೂಡ ಅನ್ಯಾಯ ಇದ್ದರೆ ಅದನ್ನು ಬಗೆಹರಿಸಿಕೊಳ್ಳುವುದಕ್ಕೆ ಅವಕಾಶಮಾಡಿಕೊಡಬೇಕು. ಯಾವರೀತಿ ಮಂತ್ರಿಗಳು ಬಡವರಿಗೆ ಅನುಕೂಲ ಮಾಡಿಕೊಡುತ್ತಾರೆ ಎನ್ನುವ ವಿವರಣೆಯನ್ನು ಕೊಟ್ಟರೆ ಚೆನ್ನಾಗಿರುತ್ತದೆ. ಇದರ ಜೊತೆಗೆ ಸರ್ಕಾರ ನ್ಯಾಯವಾಗಿ ಬಡವನಿಗೆ ಹೆಚ್ಚಿನ ದುಡ್ಡು ಇಲ್ಲದೆ ನ್ಯಾಯ ಪಡೆದು ಕೊಳ್ಳುವುದಕ್ಕೆ ಏನು ಮಾಡಬೇಕು ಎಂದು ಯೋಚನೆ ಮಾಡಿದ್ದರೆ ಚೆನ್ನಾಗಿತ್ತು. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಅನ್ನು ಪದೇ ಪದೇ ಮಾಡದೆ, 20–30 ವರ್ಷಕ್ಕೊಂದು ಸಾರಿ ಹೊಸ ಅಸೆಂಬ್ಲಿ ಕರೆದು ಇದರ ಬಗ್ಗೆ ಏನಾದರೂ ತೀರ್ಮಾನ ಮಾಡಿದರೆ ಒಳ್ಳೆಯದು ಎಂದು ಕಾಣುತ್ತದೆ. ಕಾನ್‌ಸ್ಟಿಟ್ಯೂಷನ್ ಅನ್ನು ಪದೇ ಪದೇ ಬದಲಾವಣೆ ಮಾಡಿಕೊಳ್ಳುತ್ತಾ ಹೋಗುವುದು ಒಳ್ಳೆಯದಲ್ಲ. ಆದ್ದರಿಂದ ಜನಗಳ ನೀತಿ, ಜನಗಳ ಆರ್ಥಿಕ ಸ್ಥಿತಿ ಮತ್ತು ದೇಶದ ಪರಿಸ್ಥಿತಿಯನ್ನು ಪರಿಗಣಿಸಿ 20 ವರ್ಷಕ್ಕೆ ಒಂದು ಸಾರಿ, 15 ವರ್ಷಕ್ಕೆ ಒಂದು ಸಾರಿ ತಿದ್ದುಪಡಿ ಮಾಡಿದರೆ ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ 30 ಸಾರಿ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಆಯಿತು ಎಂದರೆ, ಯಾವುದು ಅಮೆಂಡ್‌ಮೆಂಟ್ ಆಗಿಲ್ಲ ಎನ್ನುವುದು ಗೊತ್ತಾಗುವುದಿಲ್ಲ. ಅದಕ್ಕೋಸ್ಕರ 20 ವರ್ಷ ಅಥವಾ 15 ವರ್ಷಕ್ಕೊಂದು ಸಾರಿ ಸಮಗ್ರವಾಗಿ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ. ಈಗ ಇರತಕ್ಕದ್ದರಲ್ಲಿ ಪಾರ್ಲಿಮೆಂಟ್ ಮುಂದೆ ತೀರ್ಮಾನವಾಗಿ ಅಸೆಂಬ್ಲಿಯಲ್ಲಿ ಒಪ್ಪಿಗೆ ಕೇಳುವುದಕ್ಕೋಸ್ಕರ ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚು ತೀರ್ಮಾನ ಮಾಡಬೇಕಾದದ್ದು ಇಲ್ಲ. ನಿಜವಾಗಿ ಬಡವರಿಗೆ ಅನುಕೂಲ ಮಾಡಬೇಕಾದರೆ, ಮೊದಲನೆಯದಾಗಿ ಹೆಚ್ಚಾಗಿ ಕೇಸುಗಳು ಕೋರ್ಟುಗಳಿಗೆ ಬಾರದೆ ಇರುವುದಕ್ಕೆ ಏನು ಮಾಡಬೇಕು ಎಂದು ಯೋಚನೆ ಮಾಡಬೇಕು. ಕೇಸುಗಳು ಸಾಧಾರಣವಾಗಿ ಹಳ್ಳಿಗಳ ಮತ್ತು ತಾಲ್ಲೂಕುಗಳ ಲೆವೆಲ್‌ನಲ್ಲಿ ತೀರ್ಮಾನವಾದರೆ ಒಳ್ಳೆಯದು, ಏಕೆಂದರೆ ನಿಜವಾದ ಪರಿಸ್ಥಿತಿ ಅವರಿಗೆ ಗೊತ್ತಿರುತ್ತದೆ. ಅವರೇ ಕೂತುಕೊಂಡು ತೀರ್ಮಾನ ಮಾಡಿದರೆ ಕೋರ್ಟು ಖರ್ಚು ಉಳಿಯುತ್ತದೆ ಮತ್ತು ಯಾವ ದ್ವೇಷವೂ ಇರುವುದಿಲ್ಲ ; ಸರಿಯಾದ ನ್ಯಾಯ ದೊರಕಲು ಅವಕಾಶವಾಗುತ್ತದೆ. ಸರ್ಕಾರದವರು ಕೇಸುಗಳು ಬೆಳೆಯುವುದಕ್ಕೆ ಅವಕಾಶ ಕೊಡದೆ ಸರಿಯಾಗಿ ಕಾಯಿದೆ ಮಾಡಬೇಕು. ಈಗ ತಂದಿರತಕ್ಕಂಥ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಯಾವ ರೀತಿಯಾದ ಅಡ್ಡಿಯೂ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ, ಇದು ಕಂಟ್ರವರ್ಷಿಯಲ್ ಬಿಲ್ ಏನೂ ಅಲ್ಲ. ಅದಕ್ಕಾಗಿ ಎಲ್ಲರೂ ಬಹುಮತಕ್ಕೆ ಒಪ್ಪುತ್ತಾರೆ ; ಅನ್‌ಅಪ್ರೋಸ್ಡ್ ಆಗಿ ಅಡಾಪ್ಟ್ ಮಾಡುತ್ತಾರೆ ಎಂದು ಹೇಳಿದರೂ ಕೂಡ ಅದರಲ್ಲಿ ಕೆಲವು ವಿಷಯ ಹೇಳಲಾರದೆ ಬಿಡುವುದಕ್ಕೆ ಆಗುವುದಿಲ್ಲ. ನಾನು ವಕೀಲನಾಗಿ ಕೆಲಸ ಮಾಡುವುದರಿಂದ ಈ ಕಾಯಿದೆಯಿಂದ ಎಷ್ಟು ಜನರಿಗೆ ಲಾಭವಾಗುತ್ತದೆ ಎಂದು ಹೇಳಿದರೆ ಹೈಕೋರ್ಟಿಗೆ, ನ್ಯಾಯಾಧೀಶರಿಗೆ ಅವಮಾನ ಮಾಡುತ್ತಿದ್ದೇನೆ ಎಂದು ತಪ್ಪು ತಿಳಿದುಕೊಂಡರೂ ತಿಳಿದುಕೊಳ್ಳಬಹುದು. ದುಡ್ಡು ಇದ್ದವರಿಗೆ ಮಾತ್ರ ನ್ಯಾಯಾಲಯ ಬಾಗಿಲು ತೆರೆದಿದೆ, ದುಡ್ಡು ಇಲ್ಲದವನಿಗೆ ನ್ಯಾಯಾಲಯಕ್ಕೆ ಹೋಗುವುದಕ್ಕೆ ಅವಕಾಶವಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಬ್ರಿಟಿಷರ ಕಾಲದಲ್ಲಿ, ನಮ್ಮ ದೇಶದಲ್ಲಿ ಬಡವರಿಗೆ ಒಂದು ರೀತಿಯ ಟ್ರೀಟ್‌ಮೆಂಟ್ ಶ್ರೀಮಂತರಿಗೆ ಒಂದು ರೀತಿಯ ಟ್ರೀಟ್‌ಮೆಂಟ್ ಇತ್ತು

(ಶ್ರೀ ಪಿ. ಎನ್. ಪಾಟೀಲ್)

ವೈಟ್ ಕಾಲರ್ಡ್ ಕ್ಲಾಸ್, ಬ್ಯೂರೋ ಕ್ರಟಿಕ್ಸ್ ಎಂದು, ಧನಿಕರು ಗುಂಪು ಕಟ್ಟುವುದಕ್ಕೆ ಅವಕಾಶ ಏತ್ತು. ಸ್ವರಾಜ್ಯ ಕಟ್ಟಿದ್ದು ಬಿಳಿಯ, ಕರಿಯ ಜನರಲ್ಲ. ಬತವರು ರಕ್ತ ಸುರಿದ್ದರಿಂದ ದೇಶಕ್ಕೆ ಸ್ವರಾಜ್ಯ ಬಂತು. ಸ್ವಾತಂತ್ರ್ಯ ಬಂದ ಇವತ್ತಿನತನಕ ಈ 25 ವರ್ಷಗಳಲ್ಲಿ ಯಾವುದಾದರೂ ನ್ಯಾಯ ಬಡವರಿಗೆ ಸಿಕ್ಕಿದೆಯೋ ಎಂದರೆ ಏನೂ ಇಲ್ಲ ಎಂದು ದುಃಖದಿಂದ ಹೇಳಬೇಕಾಗುತ್ತದೆ. ಒಬ್ಬರ ಬಾಯಲ್ಲಿ ಬೆಣ್ಣೆ, ಮತ್ತೊಬ್ಬರ ಬಾಯಲ್ಲಿ ಸುಣ್ಣ ಹಚ್ಚುವಂಥ ಕೆಲಸ ಮಾಡುತ್ತಿದ್ದಾರೆ ಎಂದು ನಾನು ಬೇರೆ ಪ್ಲಾಟ್‌ಫಾರಂದಲ್ಲಿ ಹೇಳಿದ್ದೇನೆ. ಸರ್ಕಾರದವರು ಇನ್ನಾದರೂ ಕಣ್ಣು ತೆರೆಯಿರಿ ಎಂದು ಹೇಳಬೇಕಾಗಿದೆ. ಸರ್ಕಾರದ ಈ ಪಾಲಿಸಿಯಿಂದ ದುಡ್ಡು ಇದ್ದವರಿಗೆ ಮಾತ್ರ ನ್ಯಾಯ ದೊರಕಿಸಿಕೊಡುವುದಾಗಿದೆ. ಈ ಮೊದಲು ಸರ್ಕಾರದ ಪಾಲಿಸಿ 20 ಸಾವಿರ ರೂಪಾಯಿ ಪ್ರಾಪರ್ಟಿ, ಆಸ್ತಿ ಇದೆ ಎಂದರೆ ಅಂಥ ಕೇಸು ಸುಪ್ರೀಂ ಕೋರ್ಟಿಗೆ ಹೋಗಬಹುದು, ಉಳಿದದ್ದು ಹೋಗ ಕೂಡದು ಎಂದು ಇತ್ತು. ಅಂಥ ಸಮಯದಲ್ಲಿಯೂ ಕೂಡ ಸ್ಪೆಷಲ್ ಕೇಸ್ ಎಂದು ಹೇಳಿ ''ಸ್ಪೆಷಲ್ ಲೀವ್ ಟು ಸುಪ್ರೀಂ ಕೋರ್ಟ್'' ಎಂದು ಹೋಗುವ ಅವಕಾಶ ಇತ್ತು. ಅದನ್ನು ಈಗ ತೆಗೆದು ಹಾಕುತ್ತಿದ್ದಾರೆ, ಅದು ಸ್ವಾಗತಾರ್ಹವಾಗಿದೆ. ಇವತ್ತಿನ ಪ್ರೊಸೀಡಿಂಗ್ಸ್ ನೋಡಿದರೆ ಇನ್ನೊಂದು ದುರ್ದೈವ ಕೆಲಸ ಮಾಡುತ್ತಾ ಇದ್ದಾರೆ. ಇಂಥ ಪಾಪದ ಕೆಲಸ ಮಾಡಿ ಪಾಪ ಕಟ್ಟಿಕೊಳ್ಳಬೇಡಿ ಎಂದು ಹೇಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಈಗ ತಂದಿರುವುದು. ಆರ್ಟಿಕಲ್ 368 ರ ಪ್ರಕಾರ ಇದರಲ್ಲಿ ಕೇವಲ ರ‍್ಯಾಟಿಫಿಕೇಷನ್ ಮಾತ್ರ ನಿಮಗೆ ಮಾಡುವುದು ಇದೆ. ಕಾನ್‌ಸ್ಟಿಟ್ಯೂಷನ್ ಪ್ರಾಪಿಷನ್‌ನಲ್ಲಿರತಕ್ಕ ಪ್ಯಾಲ್ಯೂಯೇಷನ್ ಆಫ್ ಪ್ರಾಪರ್ಟಿ ಇದ್ದುದನ್ನು ಕೊನ್ಫನ್ ಆಫ್ ಲಾ ಮಾಡಲಿಕ್ಕೆ ಸರ್ಚಫ್ಯೆ ಮಾಡಿಕೊಂಡು ಹೋಗುವಂಥಾದ್ದು ಇದೆ. ಮತ್ತು ಇದರಲ್ಲಿ ಸುಪ್ರೀಂ ಕೋರ್ಟಿಗೆ ಅಪೀಲ್ ಪವರ್ ಏನು ಇದೆ, ಅವರಲ್ಲಿ ಸ್ವಲ್ಪ ಬದಲಾವಣೆಯಾಗುತ್ತಿದೆ ಎಂದು ಹೇಳುತ್ತಿದ್ದೇನೆ. ಹೈಕೋರ್ಟಿನ ಸಂಬಂಧದಲ್ಲಿ ಏನು ಹೇಳುತ್ತಿದ್ದೀರೋ ಅದು ಮುಂದಿನ ಅಮೆಂಡ್‌ಮೆಂಟ್ ಬಿಲ್‌ನಲ್ಲಿ ಕೊಡುತ್ತೇವೆ, ಅದನ್ನು ಇದಕ್ಕೆ ಟ್ಯಾಗ್ ಆನ್ ಮಾಡುತ್ತಾ ಇದ್ದೀರಿ. ಆ ಬಿಲ್ಲಿಗೂ ಈ ಬಿಲ್ಲಿಗೂ ಏನೂ ಸಂಬಂಧವಿಲ್ಲ. ಆ ಬಿಲ್ ಬಂದಾಗ ಮಾನ್ಯ ಸದಸ್ಯರು ಬೇಕಾದಷ್ಟು ನಿರರ್ಗಳವಾಗಿ ಆದರ ಬಗ್ಗೆ ಭಾಷಣ ಮಾಡಬಹುದು.

ಶ್ರೀ ಪಿ. ಎನ್. ಪಾಟೀಲ್.—ಇಲ್ಲಿ ಈ ರೀತಿ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಮಾಡಿದ್ದೀರಿ. ಮತ್ತೊಂದು ಕಡೆ ಆಗಿರುವ ಒಂದು ದುರ್ದೈವದ ಸಂಗತಿಯನ್ನು ಹೇಳುತ್ತೇನೆ. 25 ರೂಪಾಯಿ ಕೊಟ್ಟು ಬಡವ ರಿಟ್ ಪಿಟಿಷನ್ ಹಾಕುತ್ತಿದ್ದ, ಅದನ್ನು ಈಗ 100 ರೂಪಾಯಿಗೆ ಏರಿಸುವ ಕಾನೂನನ್ನು ನೀವೇ ಮಾಡಿದ್ದೀರಿ. ಅದು ಇವತ್ತು ಬರುವುದಿಲ್ಲ, ನಾಳೆ ಬರುತ್ತದೆ ಎಂದು ಹೇಳುತ್ತೇನೆ. ಮಾನ್ಯ ಸದಸ್ಯರಾದ ಲಿಂಗಪ್ಪನವರ ಧಾರವಾಡದಲ್ಲಿ 'ಗರೀಬ ಹಠಾವ್' ಎಂದು ನಾನು ಹೇಳುವುದಿಲ್ಲ, ಅದು ಅವರೆ ಸ್ಪೆಷಲೈಸೇಷನ್ ನೂರು ರೂಪಾಯಿ ಕೋರ್ಟು ಫೀ ಕೊಡದೆ ಇದ್ದವರಿಗೆ ಹೈಕೋರ್ಟಿಗೆ ರಿಟ್ ಹಾಕುವುದಕ್ಕೆ ಬರುವುದಿಲ್ಲ. ಇಂಥ ಕಾನೂನನ್ನು ಏತಕ್ಕೆ ಮಾಡುತ್ತೀರಿ ? ಇದನ್ನು ಪ್ರೆಸ್ಟೀಜ್ ಇಷ್ಯೂ ಎಂದು ತೆಗೆದುಕೊಳ್ಳದೆ ವಿತ್‌ಡ್ರಾ ಮಾಡುವುದಕ್ಕಾಗುವುದಿಲ್ಲವೇ ? ಈ ಬಿಲ್ ಅನ್ನು ನನ್ನ ಪಾರ್ಟಿ ವತಿಯಿಂದ ಒಪ್ಪಲೇಬೇಕಾಗುತ್ತದೆ. ಇದರ ಜೊತೆಯಲ್ಲಿ ಇದರಿಂದ ಬಡವರಿಗೆ ನ್ಯಾಯಾಲಯಗಳ ಬಾಗಿಲು ಮುಚ್ಚುವಂತೆ ಆಗಿದೆ. ಮುಚ್ಚಲಾಗದಂತೆ ನೋಡಿಕೊಳ್ಳಬೇಕು. ಬಡವನಿಗೆ ಬಾರ್ ಅಸೋಸಿಯೇಷನ್ ರೆಸಲ್ಯೂಷನ್ ಪ್ರಕಾರ ಫ್ರೀ ಲೀಗಲ್ ಅಡ್ವಾಯ್ಸ್ ಕೊಡುತ್ತಾರೆ. ಬಡವನ ಪರವಾಗಿ ಫೀಸ್ ಇಲ್ಲದೆ ಅಡ್ವಾಯ್ಸ್ ಕೊಡುವುದಕ್ಕೆ ಯಾರೋ ಒಬ್ಬರು ಮುಂದೆ ಬರಬಹುದು. ಆದರೆ ಬಡವನಿಗೆ ದುಡ್ಡು ಕೊಡದ ನ್ಯಾಯಾಲಯದಲ್ಲಿ ನ್ಯಾಯ ಸಿಕ್ಕುವಂತೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಈಗ ಇರುವ ಕೋರ್ಟ ಫೀಸನ್ನು 50 ಪರ್ಸೆಂಟ್ ರೆಡ್ಯೂಸ್ ಮಾಡಬೇಕು. ಇದಕ್ಕೆ ಒಂದು ಕಾಯಿದೆಯನ್ನು ಕಾನೂನು ಮಂತ್ರಿಗಳು ತರುತ್ತಾರೆಯೇ ಎಂದು ಕೇಳಬೇಕಾಗಿದೆ. ಇಂಥಾದ್ದನ್ನು ತಂದರೆ, ಅದು ಸ್ವಾಗತಾರ್ಹ ಎಂದು ಹೇಳುತ್ತೇನೆ. ನಾಳೆ ಬರುವ ಬಿಲ್ ಇವತ್ತು ವಿತ್‌ಡ್ರಾ ಮಾಡುವ ಬಗ್ಗೆ ವಿಚಾರ ನಡೆಸಿ. ಈ ಬಿಲ್ಲಿಗೆ ನಮ್ಮ ಒಪ್ಪಿಗೆ ಇದೆ, ಆದರೆ ಕೆಲವು ಕಾಮೆಂಟ್ಸ್ ಮಾಡಬೇಕಾಗಿದೆ. ಓಬರಾಯನ ಕಾಲದಲ್ಲಿ ಇದ್ದಂತಹ ಕಾನೂನು ಎಂದು ನಿನ್ನೆ ರೆವಿನ್ಯೂ ಮಂತ್ರಿಗಳು ಹೇಳಿದರು, ಓಬರಾಯನ ಕಾಲದಲ್ಲಿ ಇದ್ದಂಥ ಕಾನೂನನ್ನು ನಮ್ಮ ಮುಂದೆ ಇಡಬೇಡಿ. ಕೊನೆಯುದಾಗಿ ಜನರಿಗೆ ದುಡ್ಡು ಇಲ್ಲದೇ ನ್ಯಾಯ ದೊರಕುವ ವ್ಯವಸ್ಥೆ ಮಾಡಿ ; ಮತ್ತು ಸರ್ಕಾರ ಫೀಸ್ ತೆಗೆದುಕೊಳ್ಳುತ್ತೀರೋ ಅದನ್ನು ಅರ್ಧಕ್ಕಿಂತ ಕಡಿಮೆ ಮಾಡಿ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†Sri C. M. ARUMUGAM (K.G.F.)—Madam Speaker, when the Hon'ble Minister for Law brought before this House the ratification of the amendments to the Constitution of India falling within the purview of the proviso to Clause (2) of article 368 thereof, proposed to be made by the Constitution (Thirtieth Amendment) Bill, 1972, he did not throw much light on this Bill. Probably, he thought that the members of this House would go through the proceedings of the Parliament or go through the Press reports on the subject. Even if we say anything, the Hon. Minister for Law, may not be in a position to convey the feelings of this august House. The Hon. Member Sri Konandur Lingappa who is also a law graduate may not have appeared before the High Court or the Supreme Court, talked about the poor and rich. He might have spoken only to show that he is also a parliamentarian,

To go to a Supreme Court to obtain justice, is a very costly affair. For instance, our Government had appointed Class III officer and then promoted him as Class I officer. Then the aggrieved person approached the High Court. The High Court upheld the appointment made by the Government. But this poor aggrieved man could not approach the Supreme Court because he was required to spend Rs. 10,000 for two days. I may bring to the notice of this House that in Japan, U.K. and other countries, there are two kinds of lawyers—one cheap lawyer and the other ordinary lawyer. The Ordinary lawyer deals with cases which appear before the Supreme Court The cheap lawyer deals with cases which come within the jurisdiction of lower courts. The cost involved in those courts may not be as high as in our courts. In India, to apprach a Supreme Court, one has to spend Rs. 1,600 for preferring an appeal. Therefore it is not possible for a poor man to approach the Supreme Court. It is also not possible for a poor man to go to Delhi and stay there as the cost is prohibitive. Moreover, Supreme Court is located at a place which is far off from Kerala, Tamil Nadu and Mysore.

In one case I remember that the Supreme Court gave a judgement on 8th December 1971; but the Mysore Government did not imple ment the orders of the Supreme Court, even after a lapse of 10 months. When the concerned person approach once again the Supreme Court for the contempt of the Court's order the Government appeared before the Supreme Court and tendered an unconditional apology. It is a shame on the part of the Law Minister and so many legal officers of the Department because they were not ab'e to implement the Supreme Court order. Article 162 does not confer power on the Government to make rule for the recruitment and conditions of service. Rules are not meant for validating illegal appointments. The Law Minister says that this amendment have been brought forward to help the poor people. The Government has not implemented the orders passed by the Supreme Court.

(SRI C. M. ARUMUGAM)

There are many writ petitions pending before the High Court and the Supreme Court in respect of illegal appointments made and supersession of seniority. The Ministers are making rules in order to secure appointment only to their son-in-laws and nephews. It is this practice which makes persons to approach the High Court and the Supreme Court to seek justice. In order to approach the Supreme Court, the concerned person should obtain a certificate from the High Court. As I have already said that going to Supreme Court is a very costly affair for a poor man. I would therefore suggest to the Law Minister kindly to move the Government of India to have a Bench of the Supreme Court at Bangalore. This will help the poor people of not only Mysore State but also to our neighbouring States like Kerala and Tamil Nadu.

3-00 P.M.

Madam Speaker, for administrative purposes, Bangalore should be made as a second Capital of India. Some people prefer Hyderabad to be the second Capital. The Government can make *via* media compromise and have the advantage of having Bangalore City as a second Capital so that a Bench of the Supreme Court could be established here, and this could also be a second Headquarters for the President. If a Bench is established here, the burden of the Supreme Court will be less and the people from the South will have the benefit of approaching the Supreme Court at a lesser cost. You will be doing a yeoman service to the common man if you get a Bench of the Supreme Court here. The building of the High Court of Mysore State was constructed some years back and it is not properly equiped and it is not well funished. It is not conducive for the judges to sit and dispose of the cases expeditiously. Therefore you must also fully equip the High Court because the Bench of the Supreme Court should work in a better atmosphere. Therefore proper buildings, proper environment and also proper remunerative conditions to the Judges should be provided. The very same facilities should also be provided to the Bench of the Supreme Court. I know there are hundreds of cases pending in the High Court. You know the proverb that justice delayed is justice denied. If the Courts are to take years to dispose of cases the persons who go to court will not be getting proper justice. The purpose for which the Courts are meant is not justified. The appointment of judges is not properly done. I know one instance where a minister of a State influenced and had his first son appointed as a Deputy Commissioner and his second son appointed as High Court Judge. The method of appointing Judges should be throughly changed. You cannot go on simply appointing Judges. The Judges should be appointed on the number of cases pending on

the file of the High Court, and the persons appointed should be placed in a good environment to work.

Sri H. SIDDAVEERAPPA (Minister for Health).— He is referring a case. It is long after the death of the father, that High Court Judge was appointed.

Sri C. M. ARUMUGAM.— Therefore appointments should be made on merits. Another point I want to suggest here. The poor man should be given the legal aid. The poor man cannot come up to the High Court or to the Supreme Court. The advocate appointed by him in the Lower Court may not be in a position to present the case. Therefore some sort of arrangement may be made to help the comman man to get the legal aid in the Lower Court and also in the Highest Court. Our Constitution is nothin but reproduction of Government of India Act, 1935. Of course there may be charges here and there. There is nothing impracticable if the Government make up its mind. As you know most of the Writ Petitions in the High Court are due to the wrong orders or wrong action taken by the Government itself. One Minister of this Ministry has appointed many people of his community in several big posts in the Departments that come under his control. He has appointed his own community men and this has been going in the name of secularism. Hundreds of appointments have been made within 7 months of his appointment as Minister. Even in the appointments made in the Municipality his influence is there. He has given specific instructions to the Departmental Heads under his control to give preference to the people of his community.

Madam SPEAKER.— How is it connected with the Subject ?

Sri C. M. ARUMUGAM.—Why I am saying this in this connection is the persons affected by such reckless posting, promotion and appointment of his own community people have approached the High Court and the number of cases have gone up. Such things *i.e.*, irregular promotions, and irregular appointments have created fear in the minds of those who are affected and those people have filed writ petitions in the High Court. Most of the Write Petitions are concerning with service matters. The Ministers themselves are creating some of these problems. In cases where the Government have created litigation in the case of any afficer, the Government should help him, otherwise he may not be able to go to the High Court or Supreme Court or even if he goes it would not be correct on the part of the Government to expect him to spend for the case though the fault lies with the Government.

The orders of the Supreme Court are not implemented in some cases. The decision of the High Court and the Supreme Court should be implemented forthwith.

(SRI C. M. ARUMUGAM)

The next point is about the appointment of Judges. The appointment of Judges should not be under anybody's control. The Government should not interfere in the appointment of Judges. I suggest that a separate Council should be established under whose advise alone the President should appoint the Judges of the High Court and the Supreme Court. Therefore, whatever appointments made by the President, should be done only on the advice of the Council but not on the advice of the Ministers of the State Governments or Central Ministers. With these few suggestions, I support the Bill and thank you.

SRI B. B. SAYANAK (Belgaum).—Madam Speeker, the Law Minister has placed this Constitutiou (Thirtieth Amendment) Bill before this House. We have no right to pass this Bill or to reject the Bill, but our limitations are to ratify this Bill. This is a non-controversial Bill, The Civil Procedure Code was framed in the year 1908. It was for the convenience of the Britishers, The Privy Council was in London and it is 3,000 milec way from India. They had adopted the valuation of the properties to 20,000. Now we are in a Democracy and we have framed our Constitution. By this amendment valuation test will go.

The object of the Bill is :

"An appeal shall lie to the Supreme Court from any judgment decree or final order in a civil proceeding of a High Court in the territory of India if the High Court certifies.—

(*a*) that the case involves a substantial question of law of general importance :

and

(*b*) that in the opinion of the High Court the said question needs to be decided by the Supreme Court.

Here according to this Amendment, the final authority is given to the High Court, but, according to me, the standard of the High Court is going down and down. What is the reason ? We are appointing the judges and there is nepotism and casteism and so the standard of the High Court is going dowd. By this amendment we are removing the disparty between the rich and the poor and we are giving scope to the rule of Law in India. Another thing, madam, the Government of India or the Law Minister wants to remove the arrears in the Supreme Court, by bringing this Amendment. The Law Minister is of the opinion that there are so many cases pending in the Supreme court. They want to remove the arrears.

I want to place the report of the Law Commission—one of the Law Commission's reports—which mentioned that between 1965 and 1970, five thousand cases remained to be disposed of in the

Supreme Court. But how are we going to remove these arrears ? There are some cases which are dismissed under the Industrial Disputes Act. They have no remedy, according to me. I want to place before the House that the Government should make provision for the poor people in cases of dismissal under the Industrial Disputes Act. Special provision should be made providing legal aid to the poor people. This should be adopted by a Welfare State and with these words, I support this ratification.

† ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಟಿ. ಆರ್. ಶಾಮಣ್ಣನವರು ಮತ್ತು ಮಾನ್ಯ ಶ್ರೀ ಆರ್ಯಗಂ ಅವರು ನಾನು ಮೊದಲು ಈ ಮಸೂದೆಯನ್ನು ಮೆಂಡನೆ ಮಾಡುವ ವೇಳೆಯಲ್ಲಿ ಹೇಳಿದ ಪ್ರಕಾರ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಇದರಲ್ಲಿ ಬಹಳ ಮಟ್ಟಿಗೆ ಬಡವರಿಗೆ ರಾಭವಿದೆ. ಶ್ರೀಮಂತನು ಅಪೀಲ್ ಮಾಡುವ ಹಾಗೆ ಬಡವನಿಗೂ ಅಪೀಲ್ ಮಾಡುವುದಕ್ಕೆ ಇದರಲ್ಲಿ ಅವಕಾಶ ಮಾಡಲಾಗಿದೆ. ಅದರಲ್ಲಿರತಕ್ಕ ಡಿಸ್‌ಪ್ಯಾರಿಟಿ ಏನಿದೆಯೋ ಅದು ಹೋಗಬೇಕೆಂಬ ಉದ್ದೇಶದಿಂದ ಇದನ್ನು ಮಾಡಲಾಗಿದೆ. ಅವರ ಮಾನ್ಯ ಶ್ರೀ ಟಿ. ಆರ್. ಶಾಮಣ್ಣನವರು ಹೇಳಿದ್ದು ನನಗೆ ಅಷ್ಟಾಗಿ ಅರ್ಥವಾಗಲಿಲ್ಲ. ನಾನು ಅವರಿಗೆ ಇಷ್ಟು ಹೇಳುತ್ತೇನೆ. ನಮ್ಮ ನಾಡಿನಲ್ಲಿ ವಿಶೇಷತಃ ಬಡಜನರು ಹೆಚ್ಚಾಗಿರುವುದರಿಂದ ಯಾವುದೇ ಒಂದು ರಾಷ್ಟ್ರದ ಘಟನಾವಳಿಯಲ್ಲಿ ಇರಬೇಕಾದಂಥ ಹಕ್ಕುಗಳನ್ನು ಅವರೂ ಸಹ ನ್ಯಾಯವಾಗಿ ಪಡೆಯಬೇಕಾಗಿದೆ. ಅವರ ಆಸ್ತಿ 20 ಸಾವಿರ ರೂಪಾಯಿಗಳವರೆಗೇ ಇರುತ್ತದೆಂದು ಹೇಳಕ್ಕಾಗುವುದಿಲ್ಲ. ಒಂದು ವೇಳೆ ವಿಪರೀತವಾದ ಬಡತನದಿಂದ ಅವನ ಆಸ್ತಿ 20 ಸಾವಿರಕ್ಕಿಂತ ಕಡಿಮೆ ಇದ್ದಂಥ ಸಮಯದಲ್ಲಿ ಅಂಥವರೂ ಸಹ ಕೇಸಿನಲ್ಲಿ ಇನ್‌ವಾಲ್ವ್ ಆದಂಥ ಸನ್ನಿವೇಶದಲ್ಲಿ ಎಲ್ಲರಿಗೂ ಇರುವಂತಹ ಫಂಡಮೆಂಟರ್ ಹಕ್ಕುಗಳ ಪ್ರಕಾರ ಅವರೂ ಸಹ ಸುಪ್ರೀಂ ಕೋರ್ಟಿನವರೆಗೆ ಹೋಗುವುದಕ್ಕೆ ಈಗಿರುವ ಕಾನೂನಿನ ಪ್ರಾವಿಷನ್ಸ್ ಪ್ರಕಾರ ಅವಕಾಶವಿಲ್ಲ. ಈಗ ತಂದಿರುವ ತಿದ್ದುಪಡಿ ಕಾಯಿದೆ ಪ್ರಕಾರ 20 ಸಾವಿರ ರೂಪಾಯಿಗಳಿಗಿಂತ ಕಡಿಮೆ ಆಸ್ತಿ ಇದ್ದರೂ ಸುಪ್ರೀಂ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಕೊಟ್ಟಿದೆ.

Sri. T. R. SHAMANNA.—I want a clarification whether the worth of the man has to be Rs 20,000 or the worth of the case has to be Rs. 20,000.

ಶ್ರೀ ಡಿ. ಕೆ. ನಾಯ್ಕರ್.—ಕೆಲವೊಂದು ಬಡಜನರ ಆಸ್ತಿ ಕಮ್ಮತ್ತು 20 ಸಾವಿರಕ್ಕಿಂತ ಹೆಚ್ಚಿಗೆ ಇರಕ್ಕಿಲ್ಲವೆನ್ನುವಾಗ, ಅಂತಹ ಕೇಸುಗಳಲ್ಲಿ ಎಂತಹ ಕಾನೂನು ಇದ್ದರೂ ಕೂಡ ಅವರಿಗೆ ಸುಪ್ರೀಂ ಕೋರ್ಟಿಗೆ ಹೋಗುವಂತಹ ಒಂದು ಆಪರ್ಚ್ಯುನಿಟಿ ಇದರಲ್ಲಿರಲಿಲ್ಲ. ಈಗ ಅದಕ್ಕೆ ತಿದ್ದುಪಡಿ ಮಾಡಲಾಗಿದೆ. ಒಂದು ವೇಳೆ ಆಸ್ತಿ ಕಮ್ಮತ್ತು 20 ಸಾವಿರ ರೂಪಾಯಿಗಳಿಗಿಂತ ಎಷ್ಟೇ ಕಡಿಮೆ ಇದ್ದರೂ ಅಂತವರ ಕೇಸಿನಲ್ಲಿ ಕಾನೂನು ರಕ್ಷಣೆ ಇರಬೇಕೆಂದೂ ಒಂದು ವೇಳೆ ಕಾನೂನು ತೊಡಕು ಇದ್ದರೆ ಅದನ್ನು ಪರಿಹಾರ ಮಾಡುವುದಕ್ಕೋಸ್ಕರ, ಅವರ ಬಗ್ಗೆ ಯೋಗ್ಯವಾದ ಕಾನೂನನ್ನು ಜಾರಿಗೆ ಕೊಡುವುದಕೋಸ್ಕರ, ಈಗಿನ ಮಸೂದೆಯಲ್ಲಿ ತಿದ್ದುಪಡಿ ಮಾಡಲಾಗಿದೆ. ಇಲ್ಲದಿದ್ದರೆ ವಿಶೇಷತಃ ಆಸ್ತಿ ಕಮ್ಮತ್ತು 20 ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಇರತಕ್ಕ ವರಿಗೇ ಕೊತ್ತ ಸುಪ್ರೀಂ ಕೋರ್ಟಿಗೆ ಹೋಗುವ ಸಂದರ್ಭ ಇರುತ್ತಿತ್ತು. ಅಂಥಾದ್ದನ್ನು ಈಗ ಹೊಟುಕ್ಕಗೊಳಿಸಿ ಇದರಿಂದ ಬಡಜನರಿಗೂ ಕೂಡ ಅನುಕೂಲವಾಗಿ, ಅವರೂ ಸಹ ಸುಪ್ರೀಂ ಕೋರ್ಟಿಗೆ ಹೋಗುವ ಚಾನ್ಸ್ ಪಡೆಯಲು ಎಂದೂ ಈಗಿನ ಘಟನಾ ಬದ್ಧವಾದ ಹಕ್ಕುಗಳ ಬಗ್ಗೆ ನ್ಯಾಯಾಧಿಪತಿಗಳಲ್ಲಿ ನ್ಯಾಯವನ್ನು ಕಲ್ಪಿಸಿಕೊಡುವುದಕ್ಕೆ ತಕ್ಕ ಅವಕಾಶವನ್ನು ಇದರಲ್ಲಿ ಒದಗಿಸಿ ಕೊಡಲಾಗಿದೆಯೆಂದೂ ಈ ರೀತಿಯಾಗಿ ಈ ಮಸೂದೆಯಲ್ಲಿ ಅವಕಾಶ ಮಾಡಲಾಗಿದೆಯೆಂದೂ ಹೇಳಬಲ್ಲೆ. ಬಡವರ ಬಗ್ಗೆ Aid to poor people ಇದರಲ್ಲಿ ಏನೂ ಅನುಕೂಲಗಳನ್ನು ಮಾಡಲಿಲ್ಲವೆಂದೂ, ಅದರ ಅನುಕೂಲಕ್ಕೆ ತಕ್ಕಂತೆ ಇದರಲ್ಲಿ ಏನಾದರೂ ಪ್ರಾವಿಷನ್ ಮಾಡಬೇಕೆಂದೂ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಒಂದು ಸಂಬಂಧವಾಗಿ ನಾನು ಹೇಳುವುದಾದರೆ, ಈಗಾಗಲೇ ಕೇಂದ್ರ ಸರ್ಕಾರದವರು ಒಂದು ಲಾ ಕಮೀಷನ್ ಕೂಡ ಮಾತಿ ಪಡೆದು ಪುವರ್ ಪೀಪಲ್ ಬಗ್ಗೆ ಒಂದು ಇನ್‌ವೆಸ್ಟಿಗೇಷನ್ ಮಾಡಿ ಅವರು ಪರಿಹಾರ ರೂಪವಾಗಿ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಿದ್ದಾರೆ. ಅವರು ಇಪ್ಪರಲ್ಲಿಯೇ ನಮ್ಮ ರಾಜ್ಯಕ್ಕೆ ಎಸ್ಕ್ಯೂರಿಗೋಸ್ಕರ ಬರತಕ್ಕವರಾಗಿದ್ದಾರೆ. ನಮಗೆ ಇಂಟಿಮೇಷನ್ ಕಳುಹಿಸಿದ್ದಾರೆ. ಅವರು

(ಶ್ರೀ ಡಿ. ಕೆ. ನಾಯಕರ್)

ಬಂದು ಇನ್‌ವೆಸ್ಟಿಗೇಷನ ಮಾಡಿದ ನಂತರ ಯಾವ ರೀತಿ ಈ ಬಾಬನಲ್ಲಿ ಬಡವರಿಗೆ ಪರಿಹಾರ ಕೊಡಬೇಕೆಂದು ಯೋಚನೆ ಮಾಡಲಾಗಿದೆಯೆಂದು ನಾನು ಹೇಳಬಲ್ಲೆ.

ಇನ್ನು ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಮಾತೃಭಾಷೆಯಲ್ಲಿಯೇ ನ್ಯಾಯಾಲಯಗಳಲ್ಲಿ ನಡೆವಳಿಕೆಗಳು ನಡೆಯಬೇಕೆಂದು ತಮ್ಮ ಮಾತಿನಲ್ಲಿ ಹೇಳಿದ್ದಾರೆ. ರಾಜ್ಯಾಂಗದ ಪ್ರಕಾರ ಅಂದರೆ, ಕಾನ್‌ಸ್ಟಿಟ್ಯೂಷನ್ನಿನಲ್ಲಿ ಹೇಳಿರುವ ಪ್ರಕಾರ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನಲ್ಲಿ ಯಾವ ಭಾಷೆಯಲ್ಲಿ ನಡವಳಿಕೆಗಳು ಇರಬೇಕೆಂದು ನಿರ್ದಿಷ್ಟಪಡಿಸಲಾಗಿದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಬಿಟ್ಟು ಉಳಿದ ಸಬಾರ್ಡಿನೇಟ್ ಕೋರ್ಟುಗಳಲ್ಲಿ ಯಾವ ಲ್ಯಾಂಗ್ವೇಜ್ ಇರಬೇಕೆಂಬ ಬಗ್ಗೆ ಸರ್ಕಾರ ಬದರಾಯಿಸುವ ಅವಕಾಶವಿದೆ. ಈ ಮೊದಲೇ ಹಿಂದಿನ ಸಭೆಯಲ್ಲಿ ಸರ್ಕಾರ ಈ ಬಗ್ಗೆ ಸೂಕ್ತವಾಗಿ ಕ್ರಮ ತೆಗೆದುಕೊಂಡಿದ್ದಾರೆ. ಇಂದು ಮಾನ್ಯ ಶ್ರೀ ಆರ್ಮುಗಂ ಅವರು ಸುಪ್ರೀಂ ಕೋರ್ಟಿನಲ್ಲಿ ಅದಂಥ ನಿರ್ಣಯವನ್ನು ಇಲ್ಲಿ ಹೇಳಿದ್ದಾರೆ. ಅದನ್ನು ಸಕಾಲದಲ್ಲಿ ಇಂಪ್ಲಿಮೆಂಟ್ ಮಾಡದೇ ಇರುವುದರಿಂದ, ಈ ಸರ್ಕಾರದಿಂದ ಸುಪ್ರೀಂ ಕೋರ್ಟ್ ಕಂಟೆಂಪ್ಟ್ ಬಗ್ಗೆ ಕ್ಷಮಾಪಣೆ ಕೇಳಲಾಗಿದೆ. ಆದ್ದರಿಂದ ಈ ಅಮೆಂಡ್‌ಮೆಂಟ್ ಮೇಲೆ ಮಾತನಾಡುವಾಗ ಆ ವಿಷಯ ಹೇಳುವುದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಆ ರೀತಿಯಲ್ಲಿ ಮಾತನಾಡುವಾಗ ಯಾವ ಸಂದರ್ಭದಲ್ಲಿ ಈ ತಿದ್ದುಪಡಿಯನ್ನು ತಂದಿದೆ. ಎತ್ತುವುದನ್ನು ಮಾನ್ಯ ಸದಸ್ಯರು ಲಕ್ಷ್ಯಕ್ಕೆ ತೆಗೆದುಕೊಂಡಿದ್ದರೆ ಇಂತಹ ಕಾಮೆಂಟ್ಸ್ ಮಾಡುತ್ತಿರಲಿಲ್ಲವೆಂದು ನಾನು ನಂಬಿದ್ದೇನೆ

ಇಷ್ಟು ಮಾತ್ರ ಹೇಳಿ ಎಲ್ಲಾ ಸದಸ್ಯರು ಸಂವಿಧಾನದ 31 ನೇ ತಿದ್ದುಪಡಿಯ ವಿಧೇಯಕದ ಬಗ್ಗೆ ಅನುಮತಿಯನ್ನು ಕೊಟ್ಟಿರುವುದರಿಂದ, ಅದನ್ನು ರ್ಯಾಟಿಫೈ ಮಾಡುವುದಕ್ಕೆ ಈ ಸಭೆಯನ್ನು ಕೋರುತ್ತೇನೆ.

MADAM SPEAKER.—I will put the motion to the vote of the House. The question is :

"That this House ratifies the amendments to the Constitution of India falling within the purview of the provisio to clause (2) of article 368 thereof, proposed to be made by the Constitution (Thirtieth Amendment) Bill, 1972, as passed by the two Houses of Parliament."

The Motion was adopted unanimously.

THE MYSORE HOMOEOPATHIC PRACTITIONERS (AMENDMENT) BILL, 1272.

Motion to consider

Sri H. SIDDAVEERAPPA (Minister for health).—Mr. Speaker, I beg to move

"That the Mysore Homoeopathic Practitioners (Amendment) Bill, 1972, be taken into consideration."

MADAM SPAEKER.—Motion moved:

'That the Mysore Homoeopathic Practitioners (Amendment) Bill, 1972, be taken into consideration."

[MR. DEPUTY SPEAKER in the Chair]